

ಕರ್ನಾಟಕ ಸರ್ಕಾರ

ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ

ಬಾಲಚೇತನ – 2
Balachethana-2
(UKG)

NOT TO BE REPUBLISHED © KTBS

ಪರಿಸರ ಅಧ್ಯಯನ (EVS)

ಅಭ್ಯಾಸ ಪುಸ್ತಕ – Work Book

ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಇಲಾಖೆ

ಬನಶಂಕರಿ 3ನೇ ಹಂತ, ಬೆಂಗಳೂರು–560 085

ಸಾಹಿತ್ಯ ರಚನೆ

ಮಾರ್ಗದರ್ಶನ

ಶ್ರೀಮತಿ ವಿ. ರಶ್ಮಿ ಮಹೇಶ್ ಭಾ.ಆ.ಸೇ. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ, ಕರ್ನಾಟಕ ಸರ್ಕಾರ	**ಶ್ರೀ ವಿಕಾಸ್ ಕಿಶೋರ್ ಸುರಳ್ಕರ್** ಭಾ.ಆ.ಸೇ. ಆಯುಕ್ತರು ಶಾಲಾ ಶಿಕ್ಷಣ ಇಲಾಖೆ ನೃಪತುಂಗರಸ್ತೆ, ಬೆಂಗಳೂರು	**ಡಾ. ಕೆ. ವಿದ್ಯಾಕುಮಾರಿ** ಭಾ.ಆ.ಸೇ. ರಾಜ್ಯ ಯೋಜನಾ ನಿರ್ದೇಶಕರು ಸಮಗ್ರ ಶಿಕ್ಷಣ ಕರ್ನಾಟಕ.

ಸಲಹೆ

ಶ್ರೀ ಗೋಪಾಲಕೃಷ್ಣ ಹೆಚ್.ಎನ್.
ನಿರ್ದೇಶಕರು, ಡಿ.ಎಸ್.ಇ.ಆರ್.ಟಿ. ಬೆಂಗಳೂರು.

ಸಹಕಾರ

ಶ್ರೀ ಬಿ.ಎಸ್. ಜಗದೀಶ್ವರ ಸಹನಿರ್ದೇಶಕರು, ಡಿ.ಎಸ್.ಇ.ಆರ್.ಟಿ. ಬೆಂಗಳೂರು.	**ಶ್ರೀಮತಿ ಮಂಗಳ .ಜಿ** ಉಪನಿರ್ದೇಶಕರು, ಡಿ.ಎಸ್.ಇ.ಆರ್.ಟಿ. ಬೆಂಗಳೂರು.
ಕಾರ್ಯಕ್ರಮ ನಿರ್ವಹಣೆ	**ಪರಿಶೀಲಕರು**
ಶ್ರೀಮತಿ ಎಸ್.ಎನ್.ಕೆ. ಶೈಲಜ ಹಿರಿಯ ಸಹಾಯಕ ನಿರ್ದೇಶಕರು ಡಿ.ಎಸ್.ಇ.ಆರ್.ಟಿ. ಬೆಂಗಳೂರು	**ಶ್ರೀ ರವೀಂದ್ರ ಆರ್.ಡಿ.** ಸಹಶಿಕ್ಷಕರು ಸರ್ಕಾರಿ ಪ್ರೌಢಶಾಲೆ, ಲೋಕನಾಥಪುರ ಕೊಪ್ಪ ತಾಲ್ಲೂಕು, ಚಿಕ್ಕಮಗಳೂರು ಜಿಲ್ಲೆ

ಸಂಪನ್ಮೂಲ ತಂಡ

ಶ್ರೀ ನಾಗೇಂದ್ರ ಸಿನ್ನೂರ ಉಪನ್ಯಾಸಕರು, ಡಯಟ್ ವಿಜಯಪುರ	**ಶ್ರೀ ಶಿವಮೂರ್ತಿ ಹಣಜಿ** ಸಹಾಯಕ ನಿರ್ದೇಶಕರು, ಕಲಾವಿಭಾಗ ಡಿ.ಎಸ್.ಇ.ಆರ್.ಟಿ. ಬೆಂಗಳೂರು
ಶ್ರೀ ಗೋಪಿನಾಥ್ ಬಿ.ಎಸ್. ಬಿ.ಆರ್.ಪಿ, ಬಿ.ಆರ್.ಸಿ. ಬಂಗಾರಪೇಟೆ ಕೋಲಾರ ಜಿಲ್ಲೆ	**ಶ್ರೀ ರಾಘವೇಂದ್ರ ಬಿ ಬಡಿಗೇರ** ಸಹ ಶಿಕ್ಷಕರು, ಸಹಿಪ್ರಾ ಶಾಲೆ, ಎತ್ತಿನಗುಡ್ಡ, ಪಿ.ಹೆಚ್.ಕ್ಯೂ (ಕ) ಕ್ಲಸ್ಟರ್, ಧಾರವಾಡ ಶಹರ, ಧಾರವಾಡ ಜಿಲ್ಲೆ
ಶ್ರೀ ರಂಗನಾಥ ಎಸ್.ಆರ್. ಬಿ.ಆರ್.ಪಿ, ಬಿ.ಆರ್.ಸಿ. ಕೊಪ್ಪ ತಾಲೂಕು, ಚಿಕ್ಕಮಗಳೂರು ಜಿಲ್ಲೆ	**ಶ್ರೀಮತಿ ಮಮತ ಡಿ.** ಸಹ ಶಿಕ್ಷಕರು, ಸ.ಹಿ.ಪ್ರಾ. ಶಾಲೆ, ಯಡೇಹಳ್ಳಿ, ಸಕಲೇಶಪುರ ತಾಲೂಕು, ಹಾಸನ ಜಿಲ್ಲೆ
ಶ್ರೀಮತಿ ನೇತ್ರಾವತಿ ರಾಂಪುರೆ ಸಹ ಶಿಕ್ಷಕರು, ಸ.ಹಿ.ಪ್ರಾ. ಶಾಲೆ, ನಾವದಗಿ ಬಿ, ಮಾಹಾಗಾಂವ ಕ್ಲಸ್ಟರ್, ಕಮಲಾಪುರ ತಾಲೂಕು, ಕಲಬುರ್ಗಿ ಜಿಲ್ಲೆ	**ಶ್ರೀ ವಿನೋದ ಕುಮಾರ್** ಚಿತ್ರಕಲಾ ಶಿಕ್ಷಕರು, ಸ.ಹಿ.ಪ್ರಾ.ಶಾಲೆ, ಚಿಕ್ಕಮಾಳಿಗೆ ಕೊಪ್ಪಲು, ಮಳವಳ್ಳಿ ಮಂಡ್ಯ ಜಿಲ್ಲೆ

©KTBS NOT TO BE REPUBLISHED

ಆಶಯ ನುಡಿ

ಶಾಲಾ ಶಿಕ್ಷಣದಲ್ಲಿ ಪೂರ್ವ ಪ್ರಾಥಮಿಕ ಹಂತವು ಅತ್ಯಂತ ಪ್ರಮುಖ ಘಟ್ಟವಾಗಿದ್ದು, ಭವಿಷ್ಯದಲ್ಲಿ ಕಲಿಕೆಯಿಂದಾಗಿ ಉಂಟಾಗುವ ಸಕಾರಾತ್ಮಕ ಪರಿವರ್ತನೆಗೆ ಭದ್ರ ಬುನಾದಿಯನ್ನು ಒದಗಿಸುತ್ತದೆ. ಈ ಹಂತದಲ್ಲಿ ಮಕ್ಕಳು ವಿಷಯವನ್ನು ಅರ್ಥೈಸಿಕೊಳ್ಳಲು ಮತ್ತು ಭಾಷೆಯನ್ನು ಸರಿಯಾಗಿ ಬಳಸುವ ಮೂಲಕ ಅವರ ಸಂವಹನ ಕೌಶಲವನ್ನು ಹಾಗೂ ಕಲಿಕೆಯನ್ನು ಸುಧಾರಿಸಿಕೊಳ್ಳಲು ಸದೃಢ ಅಡಿಪಾಯದ ಅವಶ್ಯಕತೆ ಇರುತ್ತದೆ. ಸಂವಹನ ಮತ್ತು ಅಭಿವ್ಯಕ್ತಿ ಕೌಶಲವನ್ನು ಉತ್ತಮಪಡಿಸಲು ಅನುಕೂಲವಾಗುವಂತೆ ಪೂರ್ವ ಪ್ರಾಥಮಿಕ ಹಂತದ ವಿದ್ಯಾರ್ಥಿಗಳಿಗೆ ಚಟುವಟಿಕೆಗಳನ್ನು ಒಳಗೊಂಡ ಚಿತ್ರಸಹಿತ ಅಭ್ಯಾಸ ಪುಸ್ತಕಗಳನ್ನು ದ್ವಿಭಾಷಾ ಮಾಧ್ಯಮದಲ್ಲಿ ಸಿದ್ಧಪಡಿಸಲಾಗಿದೆ.

ಜೀವನದ ಮೊದಲ ಆರು ವರ್ಷಗಳ ಆರಂಭಿಕ ಬಾಲ್ಯದಲ್ಲಿ ಮೂರು ವರ್ಷದಿಂದ ಆರು ವರ್ಷಗಳವರೆಗಿನ ಹಂತವು ಪ್ರಮುಖವಾದುದ್ದಾಗಿದೆ. ಆರಂಭಿಕ ಬಾಲ್ಯದ ಹಂತವು ತ್ವರಿತ ಬೆಳವಣಿಗೆಯ ಅವಧಿಯಾಗಿದ್ದು, ಈ ಅವಧಿಯಲ್ಲಿನ ಮೆದುಳಿನ ವಿಕಾಸವು ಜೀವನದಾದ್ಯಂತ ದೈಹಿಕ ಮತ್ತು ಮಾನಸಿಕ ಬೆಳವಣಿಗೆಯ ಮೇಲೆ ಪರಿಣಾಮ ಬೀರುವ ನಿರ್ಣಾಯಕ ಅಂಶಗಳ ಮೇಲೆ ಪ್ರಭಾವ ಬೀರುತ್ತದೆ. 4 ರಿಂದ 5 ಮತ್ತು 5 ರಿಂದ 6 ವರ್ಷ ವಯಸ್ಸಿನ ಮಕ್ಕಳ ಸಮಗ್ರ ಬೆಳವಣಗೆಗೆ ಅನುಗುಣವಾಗಿ ಕಲಿಕಾಫಲ ಆಧಾರಿತ ಅಭ್ಯಾಸ ಪುಸ್ತಕವನ್ನು ಪೂರ್ವ ಪ್ರಾಥಮಿಕ ಹಂತದ ಮಕ್ಕಳ ಕಲಿಕೆಗಾಗಿ ವಿನ್ಯಾಸಗೊಳಿಸಲಾಗಿದ್ದು, ಇವುಗಳಲ್ಲಿ ಬುನಾದಿ ಅಕ್ಷರಜ್ಞಾನ, ಬುನಾದಿ ಸಂಖ್ಯಾಜ್ಞಾನ ಹಾಗೂ ಸುತ್ತಲಿನ ಪರಿಸರದ ಅರಿವನ್ನು ಮೂಡಿಸಲು ಅರ್ಥಪೂರ್ಣ ಚಟುವಟಿಕೆಗಳನ್ನು ಅಳವಡಿಸಲಾಗಿದೆ. ಭಾಷೆ–1(ಕನ್ನಡ), ಭಾಷೆ–2 (ಇಂಗ್ಲೀಷ್), ಗಣಿತ ಮತ್ತು ಪರಿಸರ ಅಧ್ಯಯನ ವಿಷಯಗಳಲ್ಲಿ ಪ್ರತ್ಯೇಕ ಚಟುವಟಿಕೆಗಳ ಪುಸ್ತಕಗಳನ್ನು ವಿನೂತನ ರೀತಿಯಲ್ಲಿ ಹೊರತರಲಾಗಿದೆ.

ಈ ಅಭ್ಯಾಸ ಪುಸ್ತಕಗಳು ವಿಭಿನ್ನ ರೀತಿಯ ಕಲಿಕಾ ಅನುಭವಗಳನ್ನು ಮಕ್ಕಳಿಗೆ ಒದಗಿಸುವ ಉದ್ದೇಶದಿಂದ ಹಲವು ಬಗೆಯ ವೈವಿಧ್ಯಮಯ ಚಟುವಟಿಕೆಗಳನ್ನು ಹೊಂದಿದ್ದು, ಸೃಜನಶೀಲ ಮತ್ತು ರಚನಾತ್ಮಕ ಕಲಿಕೆ, ವಿಮರ್ಶಾತ್ಮಕ ಚಿಂತನೆ ಹಾಗೂ ಸಮಸ್ಯೆ–ಪರಿಹರಿಸುವ ಸಾಮರ್ಥ್ಯಗಳನ್ನು ಬೆಳೆಸಲು ಸಹಾಯಕವಾಗಿವೆ. ಕಥೆಗಳು, ಪ್ರಾಸಗೀತೆಗಳು, ಹಾಡುಗಳು, ಸುತ್ತಮುತ್ತಲಿನ ವಸ್ತು, ಸಸ್ಯ ಮತ್ತು ಪ್ರಾಣಿಗಳನ್ನು ಗುರುತಿಸುವುದು, ಕಲೆ ಮತ್ತು ಕರಕುಶಲ ಚಟುವಟಿಕೆಗಳು, ಚಿತ್ರ ಬರೆಯುವುದು, ಬಣ್ಣ ತುಂಬುವುದು, ಆಟಿಕೆಗಳ ಬಳಕೆ, ವಿವಿಧ ಆಟಗಳು ಮುಂತಾದ ಚಟುವಟಿಕೆ–ಆಧಾರಿತ ಕಲಿಕಾ–ಬೋಧನಾ ವಿಧಾನವನ್ನು ಆಧರಿಸಿ ಅಭ್ಯಾಸ ಪುಸ್ತಕಗಳನ್ನು ಅಭಿವೃದ್ಧಿಪಡಿಸಿದೆ. ಇಲ್ಲಿರುವ ಚಟುವಟಿಕೆಗಳು ಶ್ರೇಣೀಕೃತವಾಗಿದ್ದು, ಅಂತರ್ಗತ ವಿಧಾನದಲ್ಲಿ ಕಲಿಯಲು ಸಹಾಯಕವಾಗಿವೆ.

ವಿದ್ಯಾರ್ಥಿಗಳಿಗೆ ಬುನಾದಿ ಅಕ್ಷರಜ್ಞಾನ, ಬುನಾದಿ ಸಂಖ್ಯಾಜ್ಞಾನ ಮತ್ತು ಪರಿಸರ ಅಧ್ಯಯನದ ಕಲಿಕೆಯಲ್ಲಿ ಭದ್ರವಾದ ಅಡಿಪಾಯವನ್ನು ಹಾಕಲು ಪ್ರತ್ಯೇಕ ಅಭ್ಯಾಸ ಪುಸ್ತಕಗಳನ್ನು ವಿನ್ಯಾಸಗೊಳಿಸಿ ಹೊರತರುವಲ್ಲಿ ಶ್ರಮಿಸಿದ ಎಲ್ಲರ ಪ್ರಯತ್ನಗಳು ಶ್ಲಾಘನೀಯವಾಗಿವೆ. ಶಿಕ್ಷಕರು, ಪೋಷಕರು ಮತ್ತು ಭಾಗೀದಾರರು ಈ ಅಭ್ಯಾಸ ಪುಸ್ತಕಗಳನ್ನು ಸದುಪಯೋಗ ಪಡಿಸಿಕೊಂಡು, ವಿದ್ಯಾರ್ಥಿಗಳ ಮೂಲಭೂತ ಕೌಶಲ್ಯಗಳ ಸಾಧನೆಗೆ ಬೆನ್ನೆಲುಬಾಗಿ ನಿಲ್ಲುತ್ತಾರೆ ಎಂದು ಭಾವಿಸುತ್ತೇವೆ.

© DSERT NOT TO BE REPUBLISHED

ಪರಿವಿಡಿ – INDEX

ಕ್ರ.ಸಂ. Sl. No.	ಘಟಕ - Units	ಪುಟ ಸಂಖ್ಯೆ P. No.
1	ನಾನು ಮತ್ತು ನನ್ನ ಸುತ್ತಮುತ್ತ Me and My Surroundings	01–08
2	ನಾನು ಮತ್ತು ನನ್ನ ನೆರೆಹೊರೆ Me and My Neighbourhood	09–17
3	ಹಬ್ಬಗಳು Festivals	18–26
4	ಪ್ರಾಣಿ ಪ್ರಪಂಚ Animal World	27–36
5	ಸಸ್ಯ ಪ್ರಪಂಚ Plant World	37–45
6	ಸಾರಿಗೆ Transportation	46–54
7	ನಮ್ಮ ಪರಿಸರ Our Environment	55–64
8	ಕಾಲಗಳು Seasons	65–74
9	ಸಂವಹನ Communication	75–82
*	ನನ್ನ ಕಲಿಕಾ ಪಯಣ My Learning Journey	83–84

@KTBS NOT TO BE REPUBLISHED

1

ನಾನು ಮತ್ತು ನನ್ನ ಸುತ್ತಮುತ್ತ
Me and My Sorroundings
1.1 ಡಿಂಗು ಟಕಾ – Dingu Takaa

- ಅಭಿನಯ ಗೀತೆಯನ್ನು ನಲಿಯುತ್ತಾ ಹಾಡೋಣ.
- **Sing the song while acting and enjoying it.**



ಅರೆ, ಡಿಂಗು ಟಕಾ ಡಿಂಗು ಟಕಾ ಡಿಂಗು ಟಕಾ ಡಿಂಗ ।
ಅರೆ, ಡಿಂಗು ಟಕಾ ಡಿಂಗು ಟಕಾ ಡಿಂಗು ಟಕಾ ಡಿಂಗ ॥



ಕಣ್ಣುಗಳಿಂದಲೆ ನಾನು ನೋಡುವೆ ।
ಕಿವಿಗಳಿಂದಲೆ ಶಬ್ದ ಕೇಳುವೆ ।
ಮೂಗಿನಿಂದಲೆ ವಾಸನೆ ಗ್ರಹಿಸುವೆ ।



©KTBS
NOT TO BE REPUBLISHED



ಅರೆ, ಡಿಂಗು ಟಕಾ ಡಿಂಗು ಟಕಾ ಡಿಂಗು ಟಕಾ ಡಿಂಗ ।
ನಾಲಿಗೆಯಿಂದಲೆ ರುಚಿಯ ತಿಳಿಯುವೆ ।
ಕಾಲುಗಳಿಂದಲೆ ನಾನು ಓಡುವೆ ।

ಅರೆ, ಡಿಂಗು ಟಕಾ ಡಿಂಗು ಟಕಾ ಡಿಂಗು ಟಕಾ ಡಿಂಗ ।




1.2 ಪಂಚೇಂದ್ರಿಯಗಳು
Sense Organs

- ಪಂಚೇಂದ್ರಿಯಗಳನ್ನು ಹೆಸರಿಸಿ, ಅವುಗಳ ಕೆಲಸಗಳ ಜೊತೆ ಹೊಂದಿಸೋಣ.
- **Name the five sense organs and match them with their functions.**













© KTBS NOT TO BE REPUBLISHED

1.3 ಯಾಕೋ ಗೊತ್ತಿಲ್ಲ...!!!
I don't know, why!!!

- ಅಭಿನಯ ಗೀತೆಯನ್ನು ಹಾಡೋಣ. ಊಟದ ವಿಧಾನಗಳು ಒಬ್ಬರಿಂದ ಮತ್ತೊಬ್ಬರಿಗೆ ಹೇಗೆ ಭಿನ್ನ ಎಂಬುದನ್ನು ಚರ್ಚಿಸೋಣ.
- **Sing an action song, followed by a discussion on how eating practices vary among individuals.**



© KTBS NOT TO BE REPUBLISHED

ಯಾಕೋ ಗೊತ್ತಿಲ್ಲ ನನಗೆ ಯಾಕೋ ಗೊತ್ತಿಲ್ಲ
ಅಪ್ಪನಿಗೆ ನಾಲ್ಕು ರೊಟ್ಟಿ, ಅಮ್ಮನಿಗೆ ಎರಡು ರೊಟ್ಟಿ
ನನಗೆ ಮಾತ್ರ ಒಂದೇ ರೊಟ್ಟಿ ಯಾಕೋ ಗೊತ್ತಿಲ್ಲ!

ನನ್ನ ಅಪ್ಪ ಅಷ್ಟೆತ್ರ, ನನ್ನ ಅಮ್ಮ ಇಷ್ಟೆತ್ರ
ನಾನು ಮಾತ್ರ ಇಷ್ಟೇ ಎತ್ರ ಯಾಕೋ ಗೊತ್ತಿಲ್ಲ!

ಅಪ್ಪನಿಗೆ ದಪ್ಪ ಮೀಸೆ ಅಮ್ಮನಿಗೆ ಉದ್ದ ಜಡೆ
ನನಗೆ ಮಾತ್ರ ಎರಡೂ ಇಲ್ಲ ಯಾಕೋ ಗೊತ್ತಿಲ್ಲ!

ಅಪ್ಪನಿಗೆ ಪ್ಯಾಂಟು ಶರ್ಟು, ಅಮ್ಮನಿಗೆ ಸೀರೆ ಕುಪ್ಪಸ
ನನಗೆ ಮಾತ್ರ ಚೋಟು ಚಡ್ಡಿ ಯಾಕೋ ಗೊತ್ತಿಲ್ಲ!

1.4 ವೈಯಕ್ತಿಕ ಸ್ವಚ್ಛತೆ
Personal Hygiene

- ಕೈಯನ್ನು ಸ್ವಚ್ಛವಾಗಿ ತೊಳೆಯುವ ವಿಧಾನವನ್ನು ಅರಿಯೋಣ.
- **Learn the correct way to wash our hands properly.**



@KTBS NOT TO BE REPUBLISHED

1.5 ಇದು ನನಗೆ ಇಷ್ಟ...
I like This...

- ಹೆಚ್ಚು ಇಷ್ಟಪಡುವ ಆಹಾರ ಪದಾರ್ಥಗಳಿಗೆ ಗುರುತು (✓) ಹಾಕೋಣ.
- **Let us put a tick (✓) mark on the food items we like the most.**








@KTBS NOT TO BE REPUBLISHED

ಸೂಚನೆ : ಚಿತ್ರದಲ್ಲಿರುವ ಆಹಾರವಲ್ಲದೆ ನಿನಗೆ ಇಷ್ಟವಾದ ಆಹಾರ ಯಾವುದು? ಕಾರಣವನ್ನು ತರಗತಿಯಲ್ಲಿ ಹೇಳು.

Note : Other than the food shown in the picture, which food do you like? Tell the reason in the classroom.

1.6 ಹಾಲಿನ ಉತ್ಪನ್ನಗಳ ಪರಿಚಯ
Introduction of Milk Products

- ಚಿತ್ರದಲ್ಲಿರುವ ಹಾಲು ಮತ್ತು ಹಾಲಿನ ಉತ್ಪನ್ನಗಳ ಕುರಿತು ಚರ್ಚಿಸೋಣ.
- **Discuss different milk products shown in the picture.**



ಸೂಚನೆ: ಹಾಲನ್ನು ಬಳಸಿ ತಯಾರಿಸಬಹುದಾದ ಇತರ ಆಹಾರ ಪದಾರ್ಥಗಳನ್ನು ಹೇಳು.

Note: Tell the other food items that can be prepared using milk.

1.7 ರೊಟ್ಟಿಯ ಹಾಡು
Rotti's Song

- ಅಭಿನಯ ಗೀತೆಯನ್ನು ಹಾಡೋಣ. ಅಗತ್ಯ ಪ್ರಮಾಣದ ಆಹಾರ ಪಡೆದು ತಿನ್ನುವುದು ಹಾಗೂ ಆಹಾರವನ್ನು ವ್ಯರ್ಥ ಮಾಡುವುದರ ಪರಿಣಾಮ ಕುರಿತು ಚರ್ಚಿಸೋಣ.
- **Sing an action song and discuss the importance of consuming the required quantity of food and the consequences of food wastage.**


ಅಮ್ಮ ರೊಟ್ಟಿಯ ಮಾಡಮ್ಮ
ಜೋಳದ ರೊಟ್ಟಿ ಮಾಡಮ್ಮ ॥ಅಮ್ಮ॥

ಅಮ್ಮ ರೊಟ್ಟಿಯ ತಟ್ಟಮ್ಮ
ಬಿಸಿ ಬಿಸಿ ರೊಟ್ಟಿ ಬೇಕಮ್ಮ।
ನನಗೆ ಒಂದೇ ಸಾಕಮ್ಮ
ಅಣ್ಣಗೆ ಎರಡು ಬೇಕಮ್ಮ ॥ಅಮ್ಮ॥

ಬದನೆ ಪಲ್ಯ ಮಾಡಮ್ಮ
ರೊಟ್ಟಿಯ ಮೇಲೆ ಹಾಕಮ್ಮ।
ಗುರೆಳ್ಳು ಚಟ್ನಿ ಬೇಕಮ್ಮ
ತಿನ್ನಲು ಬಲು ರುಚಿಯಮ್ಮ ॥ಅಮ್ಮ॥

ಕಡಲೆ ಚಟ್ನಿ ರುಚಿಯಮ್ಮ
ನಾವು ಚೆಲ್ಲುವುದಿಲ್ಲಮ್ಮ।
ಅಮ್ಮ ರೊಟ್ಟಿಯ ಮಾಡಮ್ಮ
ಜೋಳದ ರೊಟ್ಟಿಯ ಮಾಡಮ್ಮ॥

NOT TO BE REPUBLISHED @KTBS



1.8 ಪೌಷ್ಟಿಕ ಆಹಾರ
Nutritious Food

- ಚಿತ್ರದಲ್ಲಿರುವ ಪೌಷ್ಟಿಕ ಆಹಾರ ಪದಾರ್ಥಗಳ ಕುರಿತು ಚರ್ಚಿಸೋಣ.
- **Discuss the nutritious food items shown in the picture.**



© RESERVED NOT TO BE REPUBLISHED

ಸೂಚನೆ : ಇಷ್ಟದ ಆಹಾರ ಪದಾರ್ಥದ ಒಂದು ಚಿತ್ರವನ್ನು ಸಂಗ್ರಹಿಸಿ ಅಂಟಿಸೋಣ.

Note : Collect and paste a picture of your favourite food item

2

ನಾನು ಮತ್ತು ನನ್ನ ನೆರೆಹೊರೆ
Me and My Neighbourhood
2.1 ಇವರಲ್ಲಿ ನಾನೂ ಒಬ್ಬ – I am one of them

- ತನ್ನ ಮನೆ, ಶಾಲೆ, ನೆರೆಹೊರೆಯ ಜನರಂತೆ ಸಮುದಾಯದಲ್ಲಿ ತಾನೂ ಒಬ್ಬ ಸದಸ್ಯ ಎಂಬುದನ್ನು ಅರಿಯೋಣ.
- **Understand that one is member of the community along with family, school and neighbours.**



NOT TO BE REPUBLISHED

ಸುತ್ತಮುತ್ತ ಎಲ್ಲಾ ಉಂಟು, ನಮ್ಮಯ ಶಾಲೆಗೆ ಬಹಳ ನಂಟು ।
ಮುಂದೆ ಹೋದರೆ ಪೋಸ್ಟ್ ಆಫೀಸು, ಅದರ ದಾರಿ ಬಹಳ ಸಲೀಸು ॥

ಬಲಗಡೆ ಬಂದರೆ ಅಂಗಡಿ, ಮನೆಯು, ಎಡಗಡೆ ಹೋದರೆ ಆಟದ ಬಯಲು ।
ಆ ಕಡೆ ಹೋದರೆ ಆಸ್ಪತ್ರೆ, ಈ ಕಡೆ ಬಂದರೆ ಈ ಸಂತೆ ॥

ಅಲ್ಲೇ ಇರುವುದು ನಮ್ಮ ಮನೆ, ಇಲ್ಲೇ ಇರುವುದು ಇವಳ ಮನೆ ।
ಸುತ್ತಮುತ್ತ ಎಲ್ಲಾ ಉಂಟು ನಮ್ಮಯ ಶಾಲೆಗೆ ಬಹಳ ನಂಟು ॥

2.2 ಇವು ನನ್ನವು
These are mine

- ದಿನನಿತ್ಯ ಬಳಸುವ ವಸ್ತುಗಳನ್ನು ಗುರುತಿಸೋಣ. ಅವುಗಳನ್ನು ಹೇಗೆ ಜೋಪಾನ ಮಾಡಬೇಕು ಎಂಬುದನ್ನು ಅರಿಯೋಣ.
- **Identify the items used in daily life and learn how to take care of them.**



@KTBS NOT TO BE REPUBLISHED

ಸೂಚನೆ : ಮನೆಯಲ್ಲಿ ಬಳಸುವ ವಸ್ತುಗಳು ಮತ್ತು ಅವುಗಳ ಬಣ್ಣವನ್ನು ಗೆಳೆಯರೊಂದಿಗೆ ಹಂಚಿಕೊಳ್ಳೋಣ.

Note: Share the items used at home and their colours with your friends.

2.3 ಹಸಿಕಸ, ಒಣಕಸ
Wet waste, Dry Waste

- ಹಸಿ ಕಸ ಮತ್ತು ಒಣ ಕಸ ವಿಲೇವಾರಿಗೆ ಪ್ರತ್ಯೇಕ ಕಸದ ತೊಟ್ಟಿಗಳನ್ನು ಬಳಸುವ ಬಗೆಯನ್ನು ಚರ್ಚಿಸೋಣ.
- **Discuss the use of separate bins for wet waste and dry waste disposal.**







DRY WASTE WET WASTE





NOT TO BE REPUBLISHED © KTBS

ಸೂಚನೆ : ಮನೆಯಲ್ಲಿ ಹಸಿ ಕಸ ಮತ್ತು ಒಣ ಕಸ ವಿಂಗಡಿಸಿ ಪ್ರತ್ಯೇಕ ಡಬ್ಬದಲ್ಲಿ ಹಾಕಲು ಪ್ರಯತ್ನಿಸು.

Note: Separate wet and dry waste at home and put them in different bins.

2.4 ನನ್ನ ಕ್ರಾಫ್ಟ್
My Craft

- ಬೆಂಡೆಕಾಯಿ ಬಳಸಿ ಮಾದರಿಯಂತೆ ವಿವಿಧ ಬಣ್ಣಗಳಿಂದ ಒತ್ತು ಚಿತ್ರ ರಚಿಸೋಣ.
- **Create print art using ledies finger vegetable with different colours, following the given model.**


@KTBS NOT TO BE REPUBLISHED

2.5 ನಾನೂ ರಂಗೋಲಿ ಬಿಡಿಸುವೆ
I will also draw Rangoli

- ಶಾಲೆಯ ಆವರಣದಲ್ಲಿ ರಂಗೋಲಿ ಹಾಕಿ ಬಣ್ಣ ಹಚ್ಚೋಣ.
- **Let us draw a rangoli and colour it in the school premises.**



NOT TO BE REPUBLISHED





ಸೂಚನೆ : ಮನೆಯಲ್ಲಿ ಅಥವಾ ಬೇರೆ ಸ್ಥಳದಲ್ಲಿ ನೀನು
ಗಮನಿಸಿದ ರಂಗೋಲಿ ವಿನ್ಯಾಸವನ್ನು ತರಗತಿಯಲ್ಲಿ ಹಂಚಿಕೊ

Note: Share the rangoli design you observed at home or elsewhere with the class.

2.6 ಭಾವನೆಗಳು
Emotions

- ಚಿತ್ರಗಳಲ್ಲಿರುವಂತೆ ಭಾವನೆಗಳನ್ನು ಅಭಿನಯಿಸೋಣ. ಈ ಭಾವನೆಗಳು ವ್ಯಕ್ತವಾಗುವ ಸಂದರ್ಭವನ್ನು ಚರ್ಚಿಸೋಣ.
- **Act out the emotions shown in the pictures and discuss when these emotions are expressed.**



@KTBS NOT TO BE REPUBLISHED

2.7 ನನ್ನ ವಿಳಾಸ
My Address

- ಚಿತ್ರದಲ್ಲಿರುವ ಕುಟುಂಬದ ಸನ್ನಿವೇಶ ಮತ್ತು ಸದಸ್ಯರ ಪಾತ್ರ ಕುರಿತು ಮಾತನಾಡೋಣ.
- **Look at the picture and talk about the role of each family member.**



© KSEEB NOT TO BE REPUBLISHED

ಸೂಚನೆ : ನಿಮ್ಮ ಮನೆಯಲ್ಲಿರುವ ಸದಸ್ಯರು ಮಾಡುವ ಕೆಲಸ ಕುರಿತು ತಿಳಿದುಕೊಂಡು ಗೆಳೆಯರೊಂದಿಗೆ ಹಂಚಿಕೊ.

Note: Find out what your family members do at home and share it with your friends.

2.8 ನನ್ನ ಮುನ್ನೆಚ್ಚರಿಕೆ
My Precaution

- ಮನೆ ಹಾಗೂ ಶಾಲೆಯಲ್ಲಿ ಕೈಗೊಳ್ಳಬೇಕಾದ ಎಚ್ಚರಿಕೆ ಕ್ರಮಗಳ ಕುರಿತು ಚರ್ಚಿಸೋಣ. ಸರಿಯಾದ ಚಿತ್ರಕ್ಕೆ ವೃತ್ತ ಹಾಕೋಣ.
- **Look at the pictures and discuss the safety measures to follow at home and at school. Let us circle the correct picture.**



ಸೂಚನೆ : ಆಟವಾಡುವ ಹಾಗೂ ಹೊರ ಸಂಚಾರ ಸಂದರ್ಭಗಳಲ್ಲಿ ಎಚ್ಚರ ವಹಿಸಬೇಕಾದ ಕ್ರಮಗಳ ಕುರಿತು ಹಿರಿಯರಿಂದ ತಿಳಿದುಕೊ.

Note : Learn from elders about the safety rules to follow while playing and going outside.



2.9 ನನ್ನ ಇಷ್ಟದ ಚಿತ್ರಗಳು
My Favourite Pictures

- ಇಷ್ಟವಾದ ಚಿತ್ರವನ್ನು (ರಂಗೋಲಿ ಅಥವಾ ಹಬ್ಬ ಆಚರಣೆ ಇತ್ಯಾದಿ) ಸಂಗ್ರಹಿಸಿ ಅಂಟಿಸೋಣ.
- **Collect a picture you like (rangoli or a festival celebration, etc.) and paste it.**

@KTBS
NOT TO BE REPUBLISHED

3

ಹಬ್ಬಗಳು - Festivals

3.1 ಹಬ್ಬದ ಹಾಡು
Festival song

- ಅಭಿನಯದೊಂದಿಗೆ ಹಾಡಿಸಿ ಹಬ್ಬಗಳ ಬಗ್ಗೆ ಚರ್ಚಿಸೋಣ.
- **Sing with actions and discuss about festivals.**







ಸಂಕ್ರಾಂತಿ ಹಬ್ಬ ಬಂದಾಗ
ಎಳ್ಳು ಬೆಲ್ಲ ಹಂಚುವ ಆಸೆ

ಕ್ರಿಸ್ಮಸ್ ಹಬ್ಬ ಬಂದಾಗ
ಕೇಕ್ ತಿನ್ನುವ ಆಸೆ

ಯುಗಾದಿ ಹಬ್ಬ ಬಂದಾಗ
ಬೇವು ಬೆಲ್ಲ ಹಂಚುವ ಆಸೆ

ಗಣೇಶ ಚತುರ್ಥಿ ಬಂದಾಗ
ಕಡುಬು ತಿನ್ನುವ ಆಸೆ

ರಂಜಾನ್ ಹಬ್ಬ ಬಂದಾಗ
ಸುರಕುಂಬ ಕುಡಿಯುವ ಆಸೆ

ವಿಜಯದಶಮಿ ಬಂದಾಗ
ದಸರಾ ನೋಡುವ ಆಸೆ

ಹಬ್ಬಗಳು ಬಂದಾಗ
ಆಡಿ ನಲಿಯುವ ಆಸೆ

@KTBS NOT TO BE REPUBLISHED







ಸೂಚನೆ : ಹಬ್ಬಗಳಲ್ಲಿ ವಿಶೇಷತೆಯನ್ನು ಹಿರಿಯರಿಂದ ತಿಳಿದು ಹಂಚಿಕೊ

Note: Learn about the special features of festivals from elders and share them

3.2 ಹಬ್ಬದ ವಿಶೇಷ ತಿನಿಸುಗಳು
Festive Special Dishes

- ಚಿತ್ರಗಳನ್ನು ಗಮನಿಸಿ. ಹಬ್ಬಗಳಿಗೆ ಹೊಂದುವ ತಿನಿಸುಗಳಿಗೆ ಗೆರೆ ಎಳೆಯೋಣ.
- **Look at the pictures and draw a line to the foods related to festivals.**













@KTBS NOT TO BE REPUBLISHED

3.3 ಹಬ್ಬದ ಸಡಗರ
Festive Joy

- ಬಣ್ಣದ ದಾರ ಬಳಸಿ ಮನೆ ಸಿಂಗರಿಸೋಣ.
- **Decorate the house for the festival using coloured threads.**


ಸೂಚನೆ : 1. ಕೆಂಪು, ಹಸಿರು ಮತ್ತು ನೀಲಿ ಬಣ್ಣದ ಉಲನ್ ದಾರಗಳನ್ನು ಸಣ್ಣ ಸಣ್ಣ ಚೂರುಗಳಾಗಿ ಕತ್ತರಿಸಿಕೊಳ್ಳಿ

2. ಬಾಗಿಲು, ಕಿಟಕಿಗಳಿಗೆ ನೀಲಿ, ಗೋಡೆಗೆ ಕೆಂಪು ಮತ್ತು ಮೇಲ್ಛಾವಣಿಗೆ ಹಸಿರು ಬಣ್ಣದ ದಾರದ ಚೂರುಗಳನ್ನು ಅಂಟಿಸಲು ಸಹಕರಿಸಿ.

Note: 1. Cut the red, green and blue wollen threads into small pieces.

2. Help them stick pieces of blue thread on the doors, windows, red on the walls & green on the roof.

@KTBS NOT TO BE REPUBLISHED



3.4 ನಮ್ಮ ರಾಷ್ಟ್ರಧ್ವಜ
Our National Flag

- ರಾಗವಾಗಿ ಹಾಡೋಣ ಮತ್ತು ರಾಷ್ಟ್ರಧ್ವಜದ ಬಣ್ಣಗಳನ್ನು ತಿಳಿಯೋಣ.
- **Sing the song in tune and learn the colours of the national flag.**


ಏರುತಿಹುದು ಹಾರುತಿಹುದು ನೋಡು ನಮ್ಮ ಬಾವುಟ
ತೋರುತಿಹುದು ಹೊಡೆದು ಹೊಡೆದು
ಬಾನಿನಗಲ ಪಟಪಟ ॥
ಕೇಸರಿ ಬಿಳಿ ಹಸಿರು ಮೂರು ಬಣ್ಣ ನಡುವೆ ಚಕ್ರವು
ಸತ್ಯ ಶಾಂತಿ ತ್ಯಾಗ ಮೂರ್ತಿ ಗಾಂಧಿ ಹಿಡಿದ ಚರಕವು॥
ಇಂತ ಧ್ವಜವು ನಮ್ಮ ಧ್ವಜವು ನೋಡು ಹಾರುತಿಹುದು



NOT TO BE REPUBLISHED @KTBS

3.5 ಬಣ್ಣದ ಬಾವುಟ
Colourful Flag

- ನಮ್ಮ ರಾಷ್ಟ್ರ ಧ್ವಜಕ್ಕೆ ಬಣ್ಣ ತುಂಬೋಣ.
- **Colour our National Flag.**



@KTBS NOT TO BE REPUBLISHED

3.6 ವಿಭಿನ್ನ ಉಡುಪುಗಳು
Different Types of Clothes

- ಚಿತ್ರಗಳನ್ನು ಗಮನಿಸಿ ಪ್ರಾದೇಶಿಕ ಉಡುಪುಗಳನ್ನು ಗುರುತಿಸೋಣ.
- **Introduce regional dresses with the help of pictures.**










@KTBS NOT TO BE REPUBLISHED

ಸೂಚನೆ : ಹಬ್ಬಗಳಲ್ಲಿ ನೀನು ಇಷ್ಟಪಟ್ಟು ತೊಡುವ ಉಡುಪುಗಳ ಬಗ್ಗೆ ಗೆಳೆಯರೊಂದಿಗೆ ಹಂಚಿಕೊ.

Note : Share with your friends about the clothes you like to wear during festivals.

3.7 ಹಬ್ಬಗಳ ಆಚರಣೆ
Celebration of Festivals

- ಸಂಭಾಷಣೆಯನ್ನು ಆಧರಿಸಿ ಹಬ್ಬಗಳ ಕುರಿತು ಚರ್ಚಿಸೋಣ.
- **Let's discuss festivals based on the conversation.**



ಎಳ್ಳು ಅಮವಾಸ್ಯೆಯ ದಿನ, ಹೊಲಕ್ಕೆ ಹೋಗಿ ಭೂತಾಯಿ ಪೂಜೆ ಮಾಡುತ್ತೇವೆ.

On the day of the "ellu amavasye", we go to the fields and worship Mother Earth



ಕ್ರಿಸ್ ಮಸ್ ದಿನದಂದು ನಾವೆಲ್ಲರೂ ಹೊಸ ಬಟ್ಟೆ ತೊಟ್ಟು ಕೇಕ್ ತಿಂದು, ಉಡುಗೊರೆ ಹಂಚಿ ಖುಷಿ ಪಡುತ್ತೇವೆ.

On Christmas Day, we all wear new clothes, eat cake, and share gifts.

©KTBS NOT TO BE REPUBLISHED

ರಂಜಾನ್ ಹಬ್ಬದಲ್ಲಿ ಪ್ರಾರ್ಥನೆ ಸಲ್ಲಿಸಿ, ಶುಭಾಷಯ ವಿನಿಮಯ ಮಾಡಿಕೊಳ್ಳುತ್ತೇವೆ.

We pray and exchange greetings during the festival of 'Ramazan'.



- ಶಿಕ್ಷಕರು ಪ್ರಶ್ನೋತ್ತರ ಮೂಲಕ ಮನೆಯಲ್ಲಿ ಆಚರಿಸುವ ಹಬ್ಬಗಳು ಹಾಗೂ ತಿನಿಸುಗಳ ಕುರಿತು ಮಾತನಾಡಿಸುವುದು.
- **The teacher asks questions and helps students talk about the festivals and foods celebrated at home.**

3.8 ತೋರಣ
Torana (Festoon)

- ಎಲೆಗಳಿಂದ ತೋರಣ ಸಿದ್ಧಪಡಿಸೋಣ (ಯೋಜನಾ ಕಾರ್ಯ). ತೋರಣದ ಮಾದರಿಗೆ ಕ್ರಯಾನ್ಸ್ ಬಳಸಿ ಬಣ್ಣ ಹಚ್ಚೋಣ.
- **Make a torana using leaves (project work) and colour the torana design.**





NOT TO BE REPUBLISHED

3.9 ಪದಬಂಧ
Word Puzzle

- ಚಿತ್ರ ನೋಡಿ ಪದಗಳನ್ನು ಗುರುತಿಸಿ ಬಣ್ಣ ಹಚ್ಚೋಣ.
- **Let us look at the picture and identify the words and colour them.**

	ಹ	ಸಿ	ರು	
ರ	ಪೂ	ತ	ಹಿ	ಹ
	ಉ	ಡು	ಪು	ಳ
	ಗು	ಲಾ	ಬಿ	ದಿ
ಪೂ	ಜೆ		ಹೂ	ವು


@KTBS NOT TO BE REPUBLISHED

- ಶಿಕ್ಷಕರ ಸಹಾಯದಿಂದ ಪದಬಂಧದಲ್ಲಿ ಗುರುತಿಸಿದ ಪದಗಳನ್ನು ಕೊಟ್ಟಿರುವ ಜಾಗದಲ್ಲಿ ಪಟ್ಟಿ ಮಾಡೋಣ.
- **With the help of the teacher, list the words identified in the word grid.**

4

ಪ್ರಾಣಿ ಪ್ರಪಂಚ
Animal World
4.1 ಭೂ ವಾಸಿಗಳು – Earth Dwellers

- ಭೂ ವಾಸಿ ಪ್ರಾಣಿಗಳಿಗೆ (✓) ಗುರುತು ಹಾಕೋಣ.
- **Let us tick (✓) the Earth-dwellers.**



@KTBS NOT TO BE REPUBLISHED

ಸೂಚನೆ : ಪ್ರಾಣಿಗಳ ಬಗ್ಗೆ ಕೇಳಿ ತಿಳಿ.
Note: Ask and learn about animals.

4.2 ಭಿನ್ನತೆ ಗುರುತಿಸು
Identify the difference

- ಗುಂಪಿಗೆ ಸರಿ ಹೊಂದದ ಮರಿ ಪ್ರಾಣಿಯ ಸುತ್ತ ವೃತ್ತ ಹಾಕೋಣ.
- **Let us circle the baby animal that does not belongs to the group.**









@KTBS NOT TO BE REPUBLISHED

4.3 ಹೆಜ್ಜೆ ಗುರುತು
Foot Print

- ಹೆಜ್ಜೆ ಗುರುತುಗಳನ್ನು ಹೊಂದಿಸೋಣ.
- **Let us match the foot prints.**




@KTBS
NOT TO BE REPUBLISHED

ಸೂಚನೆ : ಮನೆಯ ಸುತ್ತಮುತ್ತ ನೋಡುವ ಪ್ರಾಣಿಗಳ ಹೆಜ್ಜೆ ಗುರುತುಗಳ ವ್ಯತ್ಯಾಸವನ್ನು ಗಮನಿಸು.

Note: Observe the differences in the footprints of animals seen around your house.

4.4 ಕೋಳಿಯ ಜೀವನ ಚಕ್ರ
Life Cycle of Hen

- ಕೋಳಿಯ ಜೀವನ ಚಕ್ರದ ಬಗ್ಗೆ ಚರ್ಚಿಸೋಣ.
- **Let us discuss about the life cycle of Hen.**




NOT FOR REPUBLICATION @KTBS

4.5 ಅಭಿನಯಿಸು
Enact

- ಈ ಪ್ರಾಣಿಗಳ ಚಲನೆಯಂತೆ ಅಭಿನಯಿಸೋಣ.
- **Enact the movements of these animals.**





@KSEEBS DO NOT TO BE REPUBLISHED

ಸೂಚನೆ : ನಿಮ್ಮ ಮನೆಯ ಸುತ್ತಮುತ್ತ ಕಂಡುಬರುವ ಪ್ರಾಣಿಗಳು ಮತ್ತು ಪಕ್ಷಿಗಳ ಚಲನೆ, ಧ್ವನಿಗಳನ್ನು ತಿಳಿ.

Note: Observe the movement and sounds of animals and birds found around your house.

4.6 ನನ್ನ ಆವಾಸ
My Habitats

- ಈ ಪ್ರಾಣಿಗಳ ವಾಸಸ್ಥಳಗಳನ್ನು ಗುರುತಿಸಿ ಹೇಳೋಣ.
- **Identify and name the habitats of these animals.**











ಸೂಚನೆ : ವಿವಿಧ ಪ್ರಾಣಿಗಳ ವಿಭಿನ್ನ ಆವಾಸಗಳ ಕುರಿತು ಕೇಳಿ ತಿಳಿ.

Note: Ask and learn about the different habitations of animals.

4.7 ಕಾಳಜಿ ಮತ್ತು ಆರೈಕೆ
Care and Nurture

- ಚಿತ್ರವನ್ನು ನೋಡಿ, ಮಾತನಾಡೋಣ.
- **Look at the picture and talk.**





© KSEEB NOT TO BE REPUBLISHED

ಸೂಚನೆ : ನಿನ್ನ ಮನೆಯಲ್ಲಿ ಅಥವಾ ನೆರೆಯ ಸಾಕು ಪ್ರಾಣಿಗಳಿಗೆ ಆರೋಗ್ಯ ಸಮಸ್ಯೆಯಾದರೆ ಏನು ಮಾಡುವೆ?

Note: What will you do if a pet in your home or neighbourhood has a health problem?

4.8 ಸ್ಪಂಜಿನ ಮೀನು
Sponge Fish

- ಸ್ಪಂಜಿನ ಮೀನಿನ ಆಕೃತಿ ಬಿಡಿಸಿ ಮೀನಿನ ಚಿತ್ರದ ಅಚ್ಚು ಒತ್ತೋಣ.
- **Let's draw the shape of a sponge fish and print in the box.**

ಮಕ್ಕಳೊಂದಿಗೆ ಆಕೃತಿ ರಚಿಸೋಣ:
ಹಂತಗಳು–

- ಸ್ಪಾಂಜ್ ಸಿದ್ಧಪಡಿಸಿ : ಸ್ಪಾಂಜ್ ಮೇಲೆ ಮಾರ್ಕರ್ ಬಳಸಿ ಮೀನಿನ ಆಕಾರ ಬಿಡಿಸಿ.
- ಬಣ್ಣ ಹಚ್ಚಿ : ತಟ್ಟೆಯಲ್ಲಿ ವಾಟರ್ ಕಲರ್ ಹಾಕಿ. ಮೀನಿನ ಆಕಾರ ದಲ್ಲಿ ಕತ್ತರಿಸಿದ ಸ್ಪಾಂಜನ್ನು ಬಣ್ಣದಲ್ಲಿ ಅದ್ದಿ.
- ಅದು ಒತ್ತಿ : ಖಾಲಿ ಬಾಕ್ಸ್ ಮೇಲೆ ಸ್ಪಾಂಜನ್ನು ಒತ್ತಿ ಅಚ್ಚು ಹಾಕಿ. ನಂತರ ಕಿವಿರು, ಕಣ್ಣು ಬಾಲ ರೆಕ್ಕೆಗಳನ್ನು ಒತ್ತು ಚಿತ್ರದ ಸುತ್ತ ಬಿಡಿಸಿ. ಮೀನಿನ ಚಿತ್ರ ಸಿದ್ಧವಾಗುತ್ತದೆ.



@KTBS NOT TO BE REPUBLISHED

4.9 ಕೊಕೊಕ್ಕೊ ಕೋಳಿ
Kokoko Koli

- ಪದ್ಯವನ್ನು ಗೆಳೆಯರೊಂದಿಗೆ ಹಾಡೋಣ.
- **Sing the poem together with friends.**

ಕೊಕೊಕ್ಕೊ ಕೋಳಿ, ಬೆಳಗಾಯಿತು ಏಳಿ


ಬೌ ಬೌ ನಾಯಿ, ಸಾಕು ಮುಚ್ಚು ಬಾಯಿ

ಮ್ಯಾಂವ್ ಮ್ಯಾಂವ್ ಬೆಕ್ಕೆ, ಕದ್ದು ಹಾಲು ನೆಕ್ಕೆ


ಚಿಂವ್ ಚಿಂವ್ ಅಳಿಲೆ, ಅಟ್ಟದಿಂದ ಇಳಿಯೇ

ಅಮ್ಮ ಅಮ್ಮ ಕರುವೆ, ಹುಲ್ಲು ಹೊತ್ತು ತರುವೆ

ಬುಸ್ ಬುಸ್ ಹಾವೆ, ಗೆಳೆಯರೆಲ್ಲ ನಾವೆ



@KTBS NOT TO BE REPUBLISHED



4.10 ನಾನು ಬರೆದ ಚಿತ್ರ
The Picture I drew

- ಇಷ್ಟದ ಚಿತ್ರ ಬಿಡಿಸಿ ಬಣ್ಣ ಹಾಕೋಣ.
- **Let us draw and paint.**

@KTBS
NOT TO BE REPUBLISHED

5

ಸಸ್ಯ ಪ್ರಪಂಚ
Plant World
5.1 ತರಕಾರಿ ಹಾಡು – Vegetable Song

- ಈ ಹಾಡನ್ನು ಅಭಿನಯದೊಂದಿಗೆ ರಾಗವಾಗಿ ಹಾಡೋಣ.
- **Let sing the song with action.**



ಬೇಕೆ ಬೇಕೆ ತರಕಾರಿ ತರತರವಾಗಿಹ ತರಕಾರಿ
ಬೆರಳನು ಹೋಲುವ ಬೆಂಡೆಕಾಯಿ
ಗೋಳಾಕಾರದ ನಿಂಬೆಕಾಯಿ
ಒರಟು ಚರ್ಮದ ಹಾಗಲಕಾಯಿ
ಹಾವನು ಹೋಲುವ ಪಡವಲಕಾಯಿ
ಕೋಲನು ಹೋಲುವ ನುಗ್ಗೆಕಾಯಿ
ನೀರನು ಕುಡಿಸುವ ಮೆಣಸಿನಕಾಯಿ
ಬೇಕೆ ಬೇಕೆ ತರಕಾರಿ ತರತರವಾಗಿಹ ತರಕಾರಿ
ರುಚಿಕರ ಊಟಕೆ ತರಕಾರಿ.













NOT TO BE REPUBLISHED @KTBS

5.2 ಗಿಡ–ಮರ–ಬಳ್ಳಿ
Plant - Tree - Creeper

- ಭೂಮಿಯ ಮೇಲೆ ಮತ್ತು ಒಳಗೆ ಬೆಳೆಯುವ ತರಕಾರಿಗಳ ಬಗ್ಗೆ ಚರ್ಚಿಸೋಣ.
- **Let us discuss about the vegetables that grow above the ground and below the ground.**



@KSEEB NOT TO BE REPUBLISHED

5.3 ಹಸಿಯಾದ ಮತ್ತು ಬೇಯಿಸಿದ ಪದಾರ್ಥಗಳು
Raw and Cooked Food items

- ಬೇಯಿಸಿ ತಿನ್ನುವ ಪದಾರ್ಥಕ್ಕೆ ಕೆಂಪು ಮತ್ತು ಹಸಿಯಾಗಿ ತಿನ್ನುವ ಪದಾರ್ಥಕ್ಕೆ ಹಸಿರು ಬಣ್ಣವನ್ನು ಕೆಳಗೆ ನೀಡಿದ ಬಾಕ್ಸ್‌ನಲ್ಲಿ ತುಂಬೋಣ.
- **Let us colour red for cooked foods and green for raw foods in the box below.**

@KTBS NOT TO BE REPUBLISHED

ಸೂಚನೆ : ನೀನು ದಿನನಿತ್ಯ ಬೇಯಿಸಿ ತಿನ್ನುವ ಹಾಗೂ ಬೇಯಿಸದೆ ತಿನ್ನುವ ಆಹಾರಗಳನ್ನು ಹೇಳು.

Note: Name the foods you eat daily that are cooked and uncooked.

5.4 ಹಾಡಿ ಕುಣಿ
Sing and Dance

- ಹೆಚ್ಚು ಇಷ್ಟಪಡುವ ಆಹಾರ ಪದಾರ್ಥಗಳಿಗೆ ಗುರುತು (✓) ಹಾಕೋಣ.
- Let us put a tick (✓) mark on the food items we like the most.



ಗದ್ದೆಲಿ ಬಂತು ರಾಗಿ
ತಿಂದವ ಆದ ಯೋಗಿ
ಹೊಲದಿ ಬಂತು ಜೋಳ
ತಿಂದವ ಆದ ತೋಳ



ಬಯಲಲಿ ಬಂತು ಅಕ್ಕಿ
ತಿಂದವ ಬಹಳ ಲಕ್ಕಿ
ಗಿಡದಿ ಬಂತು ಬೇಳೆ
ತಿಂದವ ಕಂಡ ನಾಳೆ



ಮೆದ್ದರೆ ಬೇಳೆ ಕಾಳು
ಕಾಣುವೆ ಸುಖದ ಬಾಳು
ತಿಂದರೆ ದವಸ ಧಾನ್ಯ
ಆಗುವೆ ಜಗದ ಮಾನ್ಯ






@KTBS NOT TO BE REPUBLISHED

5.5 ಹಣ್ಣಿನ ರಸ
Fruit Juice

- ಹಣ್ಣಿನ ರಸ ತಯಾರಿಸುವುದನ್ನು ತಿಳಿಯೋಣ.
- **Let us learn to make fruit juice.**



@KTBS NOT TO BE REPUBLISHED

ಸೂಚನೆ : ಹಿರಿಯರ ಸಹಾಯದಿಂದ ಬೇರೆ ಬೇರೆ ಹಣ್ಣಿನ ರಸ ತಯಾರಿಸಿ.

Note : Prepare different fruit juices with the help of elders.

5.6 ಬಣ್ಣ ಬಣ್ಣದ ಹೂವುಗಳು
Colourful Flowers

- ಈ ಹೂವುಗಳ ಹೆಸರು ಹೇಳೋಣ.
- **Let us name these flowers.**












NOT TO BE REPUBLISHED © KSEEBS

5.7 ಮೃದು, ಒರಟು, ನುಣುಪು
Soft, Rough and Smooth

- ಸಸ್ಯದ ಭಾಗಗಳನ್ನು ಗಮನಿಸಿ ಬಾಕ್ಸ್‌ನಲ್ಲಿ ಮೃದು, ಒರಟು, ನುಣುಪು, ಬರೆಯೋಣ.
- **Let us observe the parts of the plant and write soft, rough, smooth in the box**




@KTBS NOT TO BE REPUBLISHED

ಎಲೆ – leaf	ದಿಮ್ಮಿ – log	ಬೀಜ – Seed	ಹೂವು – Flower	ಬೇರು – Root

ಸೂಚನೆ : ಇವುಗಳನ್ನು ಪರಿಚಯಿಸಿ. / **Note : Introduce these.**

5.8 ಗಿಡದಿಂದ ಮರ
From Plant to Tree

- ಗಿಡ ಬೆಳೆಯಲು ಏನೇನು ಬೇಕು? ಚರ್ಚಿಸೋಣ.
- **Discuss what is needed for a plant to grow?**



@KTBS NOT TO BE REPUBLISHED

ಸೂಚನೆ : ಮನೆಯ ಹತ್ತಿರ ಇರುವ ಸಸ್ಯದ ಬೆಳವಣಿಗೆಯನ್ನು ಗಮನಿಸು.

Note : Observe the growth of a plant near your home.

5.9 ಕೊಲ್ಯಾಜ್
Collage

- ವಿಭಿನ್ನ ಆಕಾರದ ಒಣಗಿದ ಎಲೆಗಳನ್ನು ಸಂಗ್ರಹಿಸಿ ಅಂಟಿಸೋಣ.
- **Collect different shaped dried leaves, paste them.**



@KTBS
NOT TO BE REPUBLISHED

6

ಸಾರಿಗೆ – Transportation

6.1 ಸಾರಿಗೆ ವಿಧಗಳು


Modes of Transportation

- ಈ ವಾಹನಗಳ ದಾರಿಯನ್ನು ಗೆರೆ ಎಳೆದು ಹೊಂದಿಸೋಣ.
- **Match these vehicles to their mode of transportation.**



















@KTBS NOT TO BE REPUBLISHED


6.2 ವಿವಿಧ ವಾಹನ ನಿಲ್ದಾಣಗಳು
Different Vehicle Stations

- ಚಿತ್ರ ನೋಡು ಮಾತನಾಡು.
- **Look at the picture and talk.**









NOT TO BE REPUBLISHED

6.3 ನಮ್ಮ ಸಹಾಯಕರು
Our Helpers

- ಗುರುತಿಸಿ ಹೇಳೋಣ.
- **Identify and speak.**



102

ಪೊಲೀಸ್ ಕಾರ್
Police Car



101

ಅಗ್ನಿಶಾಮಕ ವಾಹನ
Fire Truck



ಶಾಲಾವಾಹನ
School Van



108

ಆಂಬುಲೆನ್ಸ್
Ambulance

@KTBS
NOT TO BE REPUBLISHED

6.4 ನಮ್ಮ ಸಹಾಯಕರು
Our Helpers

- ಯಾರು ಯಾವ ವಾಹನ ಬಳಸುವರು ಎಂಬುದನ್ನು ಹೊಂದಿಸುವ ಮೂಲಕ ತಿಳಿಯೋಣ.
- **Let's find out who uses which vehicle by matching them.**










@KTBS NOT TO BE REPUBLISHED

ಸೂಚನೆ : ಶಿಕ್ಷಕರು ಉಳಿದ ಪರಿಚಿತ ವಾಹನಗಳು ಮತ್ತು ಅದರ ಚಾಲಕರ ಕುರಿತು ಚರ್ಚಿಸುವುದು.

Note : Discuss the remaining familiar vehicles and who drives them.

6.5 ನಮ್ಮ ಸಹಾಯಕರು ಮತ್ತು ಅವರು ಬಳಸುವ ವಸ್ತುಗಳು
Our helpers and the tools they use

- ನಮ್ಮ ಸಹಾಯಕರು ತಮ್ಮ ಕೆಲಸದಲ್ಲಿ ಬಳಸುವ ಸಾಧನಗಳನ್ನು ಗುರುತಿಸಿ ಗೆರೆ ಎಳೆಯೋಣ.
- **Identify the tools our helpers use in their professions and draw a line to match them.**

















@KTBS NOT TO BE REPUBLISHED

6.6 ರಸ್ತೆ ಸುರಕ್ಷತೆ
Road Safety

- ಈ ನಿಯಮಗಳನ್ನು ಅನುಸರಿಸೋಣ.
- **Let us follow these rules.**



ರಸ್ತೆ ದಾಟುವಾಗ ಹಿರಿಯರ ಮಾರ್ಗದರ್ಶನ ಬೇಕು.



ಕಾರು ಚಲಾಯಿಸುವಾಗ ಬೆಲ್ಟ್ ಧರಿಸುವುದು ಕಡ್ಡಾಯ.



ಬಸ್ ಹತ್ತುವಾಗ ಸರತಿ ಸಾಲಿನಲ್ಲಿ ಹೋಗಬೇಕು



ರಸ್ತೆಯನ್ನು ದಾಟುವಾಗ ಎಡ–ಬಲ ಗಮನಿಸಿ ದಾಟಬೇಕು

@KTBS NOT TO BE REPUBLISHED

6.7 ರಸ್ತೆ ಸುರಕ್ಷತೆ
Road Safety

- ಸಂಚಾರ ನಿಯಮಗಳನ್ನು ಪಾಲಿಸೋಣ.
- **Follow these road safety rules.**



©KTBS NOT TO BE REPUBLISHED

6.8 ವಿಮಾನದ ಹಾಡು
Aeroplane Song

- ಹಾಡಿ ನಲಿಯೋಣ.
- **Sing and enjoy**

ಬಂತು ಬಂತು ವಿಮಾನ
ಯಾರು ಇದರ ಸಮಾನ
ಬಾನ ಬಯಲ ಯಾನ
ಮಾಡಿ ಬುಲ್ ಬುಲ್ ಗಾನ



ನೆಲವ ಬಿಟ್ಟು ಮೇಲಕ್ಕೆ
ಹೋಗುತಿಹುದು ದೂರಕ್ಕೆ
ಮೋಡದಲ್ಲಿ ಸೇರಿತು
ಗಾಳಿಯಲ್ಲಿ ತೇಲಿತು ॥ ಬಂತು ॥

ಜನರ ಹೊತ್ತು ಮೇಲಕ್ಕೆ
ಹೋಗುತ್ತಿಹುದು ದೂರಕ್ಕೆ
ದೇಶದಿಂದ ದೇಶಕ್ಕೆ
ನಿಮಿಷದಿಂದ ನಿಮಿಷಕ್ಕೆ
ಬಂತು ಬಂತು ವಿಮಾನ
ಯಾರು ಇದರ ಸಮಾನ ॥ ಬಂತು ॥



© DSERT NOT TO BE REPUBLISHED

6.9 ಕಡ್ಡಿ ವಾಹನ
Stick Vehicles

- ಐಸ್ ಕ್ರೀಮ್ ಕಡ್ಡಿಗಳನ್ನು ಬಳಸಿ ವಾಹನ ತಯಾರಿಸೋಣ.
- **Make vehicles using ice cream sticks.**








@KTBS
NOT TO BE REPUBLISHED

7

ನಮ್ಮ ಪರಿಸರ
Our Environment
7.1 ನೀರಿನ ಮೂಲಗಳು – Sources of Water

- ನೀರಿನ ಮೂಲಗಳು ಹಾಗೂ ಸಂಗ್ರಹಣೆ ಕುರಿತು ತಿಳಿ.
- **Learn about sources of water and water storage.**



@KTBS NOT TO BE REPUBLISHED

7.2 ನೀರಿನ ಮೂಲಗಳು
Sources of Water

- ನೋಡಿರುವ ಚಿತ್ರಗಳ ಮುಂದೆ ಗುರುತು (✓) ಹಾಕೋಣ.
- **Put the (✓) mark for the picture that you have seen.**














©KTBS NOT TO BE REPUBLISHED

7.3 ನೀರಿನ ಸಂರಕ್ಷಣೆ
Conservation of Water

- ನೀರಿನ ಮಾಲಿನ್ಯ ಮತ್ತು ಸಂರಕ್ಷಣೆಯ ಬಗ್ಗೆ ಚರ್ಚಿಸೋಣ.
- **Let us discuss about water pollution and conservation.**



NOT TO BE REPUBLISHED © KTBS

7.4 ನಮಗೂ ನೀರು ಬೇಕು
We Too Need Water

- ಚಿತ್ರಗಳನ್ನು ನೋಡಿ ಚರ್ಚಿಸೋಣ.
- **Look at the picture and discuss.**






NOT TO BE REPUBLISHED

ಸೂಚನೆ : ಮನೆ / ಶಾಲೆಯಲ್ಲಿ ನೀರಿನ ಮಿತ ಬಳಕೆ ಮಾಡೋಣ.

Note : Use water wisely at home and school.

7.5 ತೇಲುವ–ಮುಳುಗುವ
Float - Sink

- ಮಾಡಿ ನೋಡೋಣ.
- **Do it yourself.**



@KTBS NOT TO BE REPUBLISHED

ಸೂಚನೆ : ಈ ವಸ್ತುಗಳನ್ನು ನೀರಿನಲ್ಲಿ ಹಾಕಿ ನೋಡು : ಸೀಮೆ ಎಣ್ಣೆ, ಉಪ್ಪು, ಕಲ್ಲು, ಮಣ್ಣು, ನೀರಿನ ಬಾಟಲ್, ಸಕ್ಕರೆ, ಪೆನ್ಸಿಲ್.

Note : Put these things in water: Lime, salt, stone, soil, water bottle, sugar, pencil,

ಸೂಚನೆ : ಶಿಕ್ಷಕರ/ಪೋಷಕರ ಸಹಾಯದಿಂದ ಈ ಚಟುವಟಿಕೆಯ ಬಗ್ಗೆ ಕೇಳಿ ತಿಳಿ.

Note : Ask about this activity with the help of your teacher/parents.

7.6 ಗಾಳಿಯ ಉಪಯೋಗಗಳು
Uses of Air

- ಚಿತ್ರಗಳನ್ನು ಗಮನಿಸಿ ಚರ್ಚಿಸೋಣ.
- **Observe the pictures and discuss.**



@KTBS NOT TO BE REPUBLISHED

ಸೂಚನೆ : ಸುತ್ತಲೂ ಗಾಳಿಯಿದೆ ಎಂಬುದನ್ನು ತಿಳಿಯಲು ಉಸಿರಾಟ, ಪೇಪರ್ ಇಟ್ಟು ಊದುವ ಪ್ರಯತ್ನಗಳನ್ನು ಮಾಡಿ ನೋಡು.

Note : You can see the paper move, which shows that air is everywhere around us.

7.7 ವಾಯು ಮಾಲಿನ್ಯ
Air Pollution

- ಚಿತ್ರ ನೋಡು ಮಾತನಾಡು.
- **Look at the picture and talk.**









@KTBS NOT TO BE REPUBLISHED

7.8 ಪ್ರಯೋಗ
Experiment

- ಪ್ರಯೋಗವನ್ನು ಮಾಡೋಣ.
- **Let us do the experiment.**



ಸೂಚನೆ : ಗಾಳಿಗೂ ತೂಕವಿದೆ ಎಂಬುದನ್ನು ಸರಳ ಉದಾಹರಣೆಗಳ ಮೂಲಕ ಮಕ್ಕಳೊಂದಿಗೆ ಚರ್ಚಿಸಿ.

Note : Discuss with children that air also has weight with simple examples.

7.9 ಮಣ್ಣಿನ ಉಪಯೋಗಗಳು
Uses of Soil

- ಮಣ್ಣಿನ ಉಪಯೋಗಗಳ ಬಗ್ಗೆ ಚರ್ಚಿಸೋಣ.
- **Discuss about uses of soil.**







ಮಣ್ಣಿನ ಉಪಯೋಗಗಳು








@KTBS NOT TO BE REPUBLISHED

7.10 ಬೆಟ್ಟ, ಕಾಡು, ನದಿ
Mountain, Forest, River

- ಇವುಗಳನ್ನು ಗುರುತಿಸಿ ಬರೆಯೋಣ.
- **Identify and write.**



ಸೂಚನೆ : ಬೆಟ್ಟ, ಕಾಡು, ನದಿ, ಕಣಿವೆ, ಜಲಪಾತ

Note : Hills, Forests, River, Valleys, Waterfalls

8

ಕಾಲಗಳು
Seasons
8.1 ಚಂದಕ್ಕಿ ಮಾಮ–Chandakki Mama

- ಈ ಪದ್ಯವನ್ನು ರಾಗವಾಗಿ ಹಾಡೋಣ
- **Let us sing the poem.**



8.2 ಗಡಿಯಾರದ ಪರಿಚಯ
Introduction of Clock

- ಗಡಿಯಾರವನ್ನು ಪರಿಚಯ ಮಾಡಿಕೊಳ್ಳೋಣ.
- **Let us know about the Clock.**



ನಾನು ಒಬ್ಬ ಅಳತೆಗಾರ.
ಹಗಲು ಇರುಳು ತಿಳಿಸುವೆ.
ರವಿಯ ನಡೆಯ ಅಳೆದು
ಸಮಯ ತಿಳಿಸುವೆ.
ನಾನು ಯಾರು.....?

©KTBS NOT TO BE REPUBLISHED

- ಬಣ್ಣದ ಪೆನ್ಸಿಲ್/ಕ್ರೆಯಾನ್‌ಗಳಿಂದ ಗಡಿಯಾರದ ಚಿತ್ರ ಬಿಡಿಸೋಣ.
- **Let us draw a clock with colour pencil/cryons.**

8.3 ಹಾಡಿ ನಲಿಯೋಣ
Sing and Enjoy

- ಪದ್ಯವನ್ನು ರಾಗವಾಗಿ ಹಾಡೋಣ.
- **Let us sing the poem.**






ಉತ್ತರಿಸೋಣ :

1. ಬೇಸಿಗೆಕಾಲದಲ್ಲಿ ಗಾಳಿ ಬೀಸಿಕೊಳ್ಳಲು ..... ಸಹಾಯ ಮಾಡುತ್ತದೆ.
2. ಚಳಿಗಾಲದಲ್ಲಿ ಬೆಚ್ಚಗಿರಲು ..... ಸಹಾಯ ಮಾಡುತ್ತದೆ.
3. ಮಳೆಗಾಲದಲ್ಲಿ ನೆನೆಯದಂತೆ ..... ಸಹಾಯ ಮಾಡುತ್ತದೆ.

8.4 ಮಾಸಗಳು ಮತ್ತು ಋತುಗಳು
Months and Seasons

- ಕಾಲಗಳ ಬಗ್ಗೆ ತಿಳಿಯೋಣ.
- **Let us know about Seasons.**

ವಸಂತ ಋತು – ಚಿಗುರೊಡೆಯುವ ಕಾಲ Spring - the season of sprouting 	ಗ್ರೀಷ್ಮ ಋತು – ಬೇಸಿಗೆ ಕಾಲ Summer - Summer Season 
ವರ್ಷ ಋತು – ಮಳೆಗಾಲದ ಪ್ರಾರಂಭ Rainy - Beginning of the rainy 	ಶರದ್ ಋತು – ಬೆಳೆಗಳು ಬೆಳೆಯುವ ಕಾಲ Autumn - Season of growing crops 
ಹೇಮಂತ ಋತು – ಗಾಳಿಯಲ್ಲಿ ತಂಪು ಮತ್ತು ಶುಷ್ಕತೆ Pre Winter – Cool & Dry in the air 	ಶಿಶಿರ ಋತು – ತಂಪಾದ ವಾತಾವರಣ Winter – Cool weather 

©KTBS NOT TO BE REPUBLISHED

8.5 ವಸ್ತು ಗುರುತಿಸು
Identify Objects

- ಮಳೆಗಾಲದಲ್ಲಿ ಬಳಸುವ ವಸ್ತುಗಳಿಗೆ (✓) ಗುರುತು ಹಾಕೋಣ.
- **Let us mark (✓) objects which are used in rainy.**



- ಚಳಿಗಾಲದಲ್ಲಿ ಬಳಸುವ ವಸ್ತುಗಳಿಗೆ (✓) ಗುರುತು ಹಾಕೋಣ.
- **Let us mark (✓) objects which are used in winter.**



@KSEEB NOT TO BE REPUBLISHED

8.6 ಪೇಪರ್ ಕೋನ್
Paper Cone

- ಚಿತ್ರಗಳನ್ನು ನೋಡಿ, ಕಾಗದದ ವಿವಿಧ ರೀತಿಯ ಮಾದರಿಗಳನ್ನು ಮಾಡಿಸೋಣ.
- **Look at the picture. Make different paper crafts.**





@KTBS NOT TO BE REPUBLISHED

8.7 ಕಾಗದದ ಮರ
Paper Tree

- ಬಣ್ಣದ ಕಾಗದದ ಚೂರುಗಳನ್ನು ಬಳಸಿ ಕೊಲ್ಯಾಜ್ ರಚಿಸೋಣ.
- **Let us create a collage by using paper pieces.**



ಸೂಚನೆ : ಚಟುವಟಿಕೆ ನಿರ್ವಹಿಸಲು ಅಗತ್ಯ ಸಾಮಗ್ರಿಗಳನ್ನು ಒದಗಿಸುವುದು ಮತ್ತು ಮಾರ್ಗದರ್ಶನ ನೀಡುವುದು.

Note : Providing necessary materials and guidance to carry out the activity.



8.8 ಆಹಾರದ ಕ್ರಾಫ್ಟ್
Food Craft


- ಮಳೆಗಾಲ, ಚಳಿಗಾಲ ಹಾಗೂ ಬೇಸಿಗೆಕಾಲಗಳಲ್ಲಿ ನೀವು ನಿಮ್ಮ ಮನೆಯಲ್ಲಿ ಸೇವಿಸುವ ಆಹಾರ ಪದಾರ್ಥಗಳ ಚಿತ್ರ ಸಂಗ್ರಹಿಸಿ ಅಂಟಿಸು..
- **Collect pictures and paste the food items that you eat in your house during the rainy, winter and summer seasons.**

ಬೇಸಿಗೆಕಾಲ **Summer**	
ಮಳೆಗಾಲ **Rainy**	
ಚಳಿಗಾಲ **Winter**	

@KTBS
NOT TO BE REPUBLISHED

8.9 ಬಣ್ಣ ಹಚ್ಚುವೆ
Colouring

- ರೇಖಾಚಿತ್ರಗಳಿಗೆ ಕ್ರೇಯಾನ್ಸ್ ಬಳಸಿ ಬಣ್ಣ ಹಚ್ಚೋಣ.
- **Let us colour the drawings using crayons.**







@KTBS NOT TO BE REPUBLISHED

ಸೂಚನೆ : ಚಟುವಟಿಕೆ ನಿರ್ವಹಿಸಲು ಅಗತ್ಯ ಸಾಮಗ್ರಿಗಳನ್ನು ಒದಗಿಸುವುದು ಮತ್ತು ಮಾರ್ಗದರ್ಶನ ನೀಡುವುದು.

Note : Providing necessary materials and guidance to carry out the activity.

8.10 ಕಾಲದ ಹಾಡು
Song of Season

- ಹಾಡುತ್ತಾ ಕುಣಿಯೋಣ.
- **Let us sing and dance.**

ಬಿಳಿ ಬಿಳಿ ಹಗಲು
ಬಿಸಿ ಬಿಸಿ ಬಿಸಿಲು
ಬಂತು ಬೇಸಿಗೆ ಕಾಲ
ಬಂತು ಬೇಸಿಗೆ ಕಾಲ
ದಣಿವ ತಣಿಸಲು.. ಎಳನೀರು ॥

ಹನಿ ಹನಿ ಮಳೆಯು
ನೆನೆಯಿತು ಇಳೆಯು
ಬಂತು ಈ ಮಳೆಗಾಲ
ಬಂತು ಈ ಮಳೆಗಾಲ
ಛತ್ರಿ ಹಿಡಿವೆವು ದೋಣಿ ಬಿಡುವೆವು ॥

ತಣ್ಣನೆ ಗಾಳಿ
ಚಳಿ ಚಳಿ ಚಳಿಯು
ಬಂತು ಈ ಚಳಿಗಾಲ
ಬಂತು ಈ ಚಳಿಗಾಲ
ಬೆಚ್ಚಗೆ ಇರಲು ಅಮ್ಮನ ಮಡಿಲು ॥

@KTBS NOT TO BE REPUBLISHED

9

ಸಂವಹನ
Communication
9.1 ನಾನು ಯಾರು?–Who am I?

- ಮೊಬೈಲ್ ಬಳಕೆಯ ಉಪಯೋಗಗಳನ್ನು ತಿಳಿಯೋಣ.
- **Let us discuss about uses of mobile.**

ನಾನು ಮೊಬೈಲ್ ಫೋನ್

ನಾನು ಮೊಬೈಲ್ ಫೋನ್
ಹಲವಾರು ಹೆಸರು ನನಗುಂಟು
ನಾನು ಎಲ್ಲರ ಜೇಬಿನ ಸರದಾರ
ನನ್ನ ಕಂಡರೆ ಎಲ್ಲರಿಗೂ ಬಹಳ ಇಷ್ಟ
ಮಿತಿಯರಿತು ಬಳಸಿದರೆ ಉಪಕಾರಿ
ಮಿತಿ ಮೀರಿದರೆ ನಾನು ಅಪಾಯಕಾರಿ
ಅರಿಯಿರಿ ಮಿತಿಯ, ತಿಳಿಯಿರಿ ನೀತಿಯ
ಉಳಿಸುವೆ ಸಮಯ, ನೀಡುವೆ ಹಲವು ಸೇವೆಯ





© NCTE NOT TO BE REPUBLISHED

ಸೂಚನೆ : ಮೊಬೈಲ್ ಬಳಕೆಯ ಉಪಯೋಗಗಳನ್ನು ಹಿರಿಯರ ಸಹಾಯದಿಂದ ಕೇಳಿ ತಿಳಿ.

Note : Ask your elders about the use of mobile phones.

9.2 ಸಂವಹನ ಸಾಧನಗಳು
Modes of Communication

- ಸಮೂಹ ಮಾಧ್ಯಮಗಳ ಬಗ್ಗೆ ತಿಳಿಯೋಣ.
- **Let us discuss about mass media.**













Gmail

© KTBS NOT TO BE REPUBLISHED

9.3 ನಮ್ಮ ಸದ್ದೂ ಕೇಳಿ
Listen Our Sounds

- ಸಂಗೀತ ವಾದ್ಯಗಳನ್ನು ಪರಿಚಯಿಸಿಕೊಳ್ಳೋಣ.
- **Let us introduce musical instruments.**

















@KTPS NOT TO BE REPUBLISHED

9.4 ನಮ್ಮ ಸದ್ದೂ ಕೇಳಿ
Listen Our Sounds

- ಸಂಗೀತ ವಾದ್ಯಗಳನ್ನು ಪರಿಚಯಿಸಿಕೊಳ್ಳೋಣ.
- **Let us introduce musical instruments.**



@KTBS NOT TO BE REPUBLISHED

9.5 ತುರ್ತು ಸಹಾಯ ವಾಣಿಗಳು
Emergency Help Lines

- ಇವುಗಳ ಬಗ್ಗೆ ತಿಳಿಯೋಣ.
- **Let us know about this.**





@KTBS NOT TO BE REPUBLISHED

1098 CHILD HELPLINE 24X7

ಸೂಚನೆ : ತುರ್ತು ಸಂದರ್ಭಗಳಲ್ಲಿ ಬಳಸುವ ವಿವಿಧ ಸಹಾಯವಾಣಿಗಳ ಕುರಿತು ಚರ್ಚಿಸುವುದು.

Note : Discuss the various helplines used in case of emergencies.



9.6 ಸಂಗೀತ ವಾದ್ಯಗಳು
Musical Instrument

- ಸಂಗೀತ ವಾದ್ಯಗಳ 2 ಚಿತ್ರಗಳನ್ನು ಬಿಡಿಸೋಣ/ಸಂಗ್ರಹಿಸಿ ಅಂಟಿಸೋಣ.
- **Let us draw/stick 2 musical instruments.**

@KTBS
NOT TO BE REPUBLISHED

9.7 ಸಮೂಹ ಮಾಧ್ಯಮ – ಕಾರ್ಯಗಳು
Mass Media - Works

- ಮಾಹಿತಿ ತಿಳಿಯೋಣ ಮತ್ತು ಹೊಂದಿಸೋಣ.
- **Let us know about this and match them.**

	ಪತ್ರ ಬರೆಯುವುದು Writing a letter
	ಶಿಕ್ಷಕರ/ಹಿರಿಯರ ನೆರವಿನೊಂದಿಗೆ ಡಿಜಿಟಲ್ ತಂತ್ರಜ್ಞಾನ ಉಪಕರಣಗಳ ಬಳಸುವುದರಲ್ಲಿ ತೊಡಗಿಸಿಕೊಳ್ಳುವುದು. Engaging with digital technology with the assistance of the teacher/elders.
	ದಿನ ಪತ್ರಿಕೆ ಓದುತ್ತಿರುವುದು Reading a newspaper
	ರೇಡಿಯೋ ಆಲಿಸುತ್ತಾ ಬರೆಯುತ್ತಿರುವುದು. Listening to the radio and writing

NOT TO BE REPUBLISHED



9.8 ಸಮೂಹ ಮಾಧ್ಯಮಗಳು
Mass Media

- ಸಮೂಹ ಮಾಧ್ಯಮಗಳ 2 ಚಿತ್ರಗಳನ್ನು ಬಿಡಿಸೋಣ/ಸಂಗ್ರಹಿಸಿ ಅಂಟಿಸೋಣ.
- **Let us draw/stick 2 mass media pictures.**

@KTBS
NOT TO BE REPUBLISHED

ನನ್ನ ಕಲಿಕಾ ಪಯಣ – My Learning Journey

ಕ್ರ.ಸಂ. SL No.	ಥೀಮ್ – Theme	ಕಲಿಕಾ ಫಲಗಳು Learning Outcomes	ಜೂನ್ - June	ಜುಲೈ - July	ಆಗಸ್ಟ್ - Aug	ಸೆಪ್ಟೆಂಬರ್ - Sep	ಅಕ್ಟೋಬರ್ - Oct	ನವೆಂಬರ್ - Nov	ಡಿಸೆಂಬರ್ - Dec	ಜನವರಿ - Jan	ಫೆಬ್ರವರಿ - Feb	ಮಾರ್ಚ್ - Mar
1	ನಾನು ಮತ್ತು ನನ್ನ ಸುತ್ತಲಿನ – Me and My Surroundings	ಶಾಲೆ ಮತ್ತು ಮನೆಯಲ್ಲಿ ತನ್ನ ವಯಸ್ಸಿಗನುಗುಣವಾದ ಕೆಲಸಗಳನ್ನು ಮಾಡುವರು (ಉದಾ : ಗೊಂಬೆಗಳನ್ನು ಸರಿಯಾದ ಜಾಗದಲ್ಲಿ ಇಡುವುದು, ಗಿಡಗಳಿಗೆ ನೀರು ಹಾಕುವುದು) Performs appropriate chores at home and/or at school (e.g., putting away toys, watering plants)										
		ಆಹಾರ ಸೇವಿಸುವ ಮತ್ತು ಶೌಚಾಲಯವನ್ನು ಬಳಸುವ ಮೊದಲು ಮತ್ತು ನಂತರದಲ್ಲಿ ಯಾವಾಗಲೂ ಕೈಗಳನ್ನು ತೊಳೆಯುವರು ಮತ್ತು ಒಣಗಿಸುವರು. Always washes and dries hands before and after using the toilet or eating.										
		ವಿಶ್ವಾಸಾರ್ಹ ವಯಸ್ಕರ ಜೊತೆಗೆ ಅಸುರಕ್ಷಿತತೆ ಬಗ್ಗೆ ತಾವಾಗಿಯೇ ಸಂವಹಿಸುವರು. Communicates discomfort with trusted adults on their own.										
2	ನನ್ನ ನೆರೆ-ಹೊರೆ – My Neighbourhood	ತಮ್ಮ ವೈಯಕ್ತಿಕ ಸಾಮಗ್ರಿಗಳನ್ನು ಉತ್ತಮ ಸ್ಥಿತಿಯಲ್ಲಿ ನಿರ್ವಹಿಸುವರು. Maintains their personal belongings in good shape.										
		ಮನೆಯ ವಿಳಾಸ, ಕುಟುಂಬದ ಸದಸ್ಯರ ವಿವರ, ಶಾಲೆ ಇತ್ಯಾದಿ ವೈಯಕ್ತಿಕ ಮಾಹಿತಿಯನ್ನು ಹಂಚಿಕೊಳ್ಳುವರು. Shares personal identifying information such as home address, details of family members, school, etc										
		ಇತರರೊಂದಿಗೆ (ಸಹಪಾಟಿಗಳು ಪರಿಚಿತ ವಯಸ್ಕರು) ತಮ್ಮ ಅನಿಸಿಕೆಗಳನ್ನು / ಭಾವನೆಗಳನ್ನು ಹಂಚಿಕೊಳ್ಳುವರು. Shares with others (peer and familiar adults) their feelings/ emotions.										
		ಕಣ್ಣಿಗೆ ಕಾಣುವ ಬಣ್ಣ ಮತ್ತು ಆಕಾರಗಳುಳ್ಳ ವಸ್ತುಗಳನ್ನು ಅವುಗಳ ಗುಣಲಕ್ಷಣಗಳನ್ನು ಆಧರಿಸಿ ಗುಂಪು ಮಾಡುವರು. Groups objects based on combinations of visual characteristics of colours and shapes (e.g., all red triangles together, all large green leaves together)										
3.	ಹಬ್ಬಗಳು – Festivals	ಸಣ್ಣ ಪ್ರಮಾನದ ನೆರವಿನೊಂದಿಗೆ ಹೆಚ್ಚು ನಿಖರತೆಯ ಚಟುವಟಿಕೆಗಳನ್ನು ಮಾಡಲು ಸೂಕ್ಷ್ಮ ಸ್ನಾಯುಗಳನ್ನು ಸಮನ್ವಯತೆಯೊಂದಿಗೆ ಬಳಸುವರು. (ಉದಾ: ಪೆನ್ಸಿಲ್ ಡ್ರಾಯಿಂಗ್, ರೇಖೆಗಳನ್ನು ನೇರವಾಗಿ ಅಥವಾ ಬಾಗಿದ ರೀತಿಯಲ್ಲಿ ಕತ್ತರಿಸುವುದು, ಮಣಿಗಳನ್ನು ಪೋಣಿಸುವುದು, ಸ್ಪುಟವಾದ ಅಕ್ಷರ ಬರವಣಿಗೆ, ಹೂಗಳನ್ನು ಕಟ್ಟುವುದು, ಆಕೃತಿಗಳಿಗೆ ಬಣ್ಣ ಹಾಕುವುದು) Uses coordinated movements of fine motor muscles for working on activities that require more precision with some assistance. (e.g., pencil drawing, cutting on straight or curved line, threading small beads, legible writing of letters, stringing flowers, colouring within closed figure)										
		ಕಲಾ ಸಾಮಗ್ರಿಗಳು, ಉಪಕರಣಗಳು ಮತ್ತು ಸಾಧನಗಳನ್ನು ಬಳಸುವಾಗ ವಿವಿಧ ರೀತಿಯ ಹಿಡುಪುಗಳನ್ನು ಕಂಡುಕೊಂಡು ಪ್ರಯೋಗಿಸುವರು. (ಉದಾ: ಕಡ್ಡಿಗಳು, ಬೀಜಗಳು, ಬೆಣಚು ಕಲ್ಲುಗಳು, ಸೀಮೆಸುಣ್ಣ, ದಾರ, ಪೆನ್ಸಿಲ್‌ಗಳು, ಬ್ರಶ್‌ಗಳು, ಕ್ರಯೋನ್‌ಗಳು, ಪೌಡರ್, ಕತ್ತರಿ ಇತ್ಯಾದಿ) Explores a variety of grasps and grips while using art materials, tools, and instruments. (e.g., sticks, seeds, pebbles, stones, chalk, thread, pencils, brushes, crayons, powder, scissors)										
4.	ಪ್ರಾಣಿ ಪ್ರಪಂಚ – Animal World	ಚಿತ್ರಗಳು ಮತ್ತು ಮಾದರಿಗಳಲ್ಲಿನ ತನ್ನ ಪರಿಸರದಲ್ಲಿರುವ ಸಾಮಾನ್ಯ ವಸ್ತುಗಳು, ಜನರು, ಚಿತ್ರಗಳು, ಪ್ರಾಣಿಗಳು ಮತ್ತು ಪಕ್ಷಿಗಳ ಸಾಮಾನ್ಯ ಅಂಶಗಳನ್ನು ಗುರುತಿಸುವರು ಹಾಗೂ ವಿವರಿಸುವರು. (ಉದಾ: ಮನೆಯ ದೊಡ್ಡ ಬಾಗಿಲು) Notices and describes general details of common objects, people, pictures, animals, birds in the immediate environment and in pictures/models (e.g., the big door in the house)										
		ಪರಿಚಿತ ವಸ್ತುವಿನ ಚಿತ್ರದಲ್ಲಿನ ಕಾಣೆಯಾದ 4–6 ಭಾಗಗಳನ್ನು ಗುರುತಿಸುವರು. Identifies 4-6 missing parts of a picture of familiar object.										

© KTBS NOT TO BE REPUBLISHED

ಪೋಷಕರ ಸಹಿ
Parent's Signature

ಶಿಕ್ಷಕರ ಸಹಿ ಮತ್ತು ದಿನಾಂಕ
Teacher's Signature & Date

		ಒಂದು ವರ್ಗದ ಒಳಗಿರುವ ಶ್ರೇಣಿಕೃತ ಸಂಬಂಧಗಳನ್ನು ಗುರುತಿಸುವರು. (ಉದಾ : ಪ್ರಾಣಿಗಳು ಮತ್ತು ಅವುಗಳ ಮರಿಗಳೊಂದಿಗೆ ಇರುವ ಸಂಬಂಧಗಳು Recognizes hierarchical relationships within categories (e.g., animals and their younger ones)										
5	ಸಸ್ಯ ಪ್ರಪಂಚ – Plant Kingdom	ಅನುಕ್ರಮವಾಗಿ 3 ರಿಂದ 5 ವಸ್ತುಗಳನ್ನು ಗಟ್ಟಿಯಾದ ಮತ್ತು ಮೃದುವಾದ, ಬಿಸಿಯಾದ ಮತ್ತು ತಂಪಾದ, ಒರಟಾದ ಮತ್ತು ನುಣುಪಾದ ವಸ್ತುಗಳಾಗಿ ಗುರುತಿಸಿ, ಸರಿಯಾಗಿ ಜೋಡಿಸುವರು. Seriates 3-5 objects based on hard and soft, hot and cold, rough and smooth with right vocabulary (smoothest, smooth, hard, harder, hardest)										
		ವಿಭಿನ್ನ ಸ್ವರೂಪದ ವಸ್ತುಗಳನ್ನು ಸೇರಿಸಿ ಕೊಲಾಜ್ ಮಾಡುವರು. Creates collages by combining materials of varying consistencies, colours, and textures in one's own arrangement.										
		ತನ್ನ ಸ್ಥಳೀಯ ಪರಿಸರದಲ್ಲಿರುವ ಪ್ರಾಣಿಗಳು ಮತ್ತು ಸಸ್ಯಗಳೊಂದಿಗೆ ತೊಡಗಿಕೊಳ್ಳುವುದರಲ್ಲಿ ಖುಷಿಯನ್ನು ತೋರಿಸುವರು. Shows joy in engaging with plants and animals in the local environment.										
6.	ಸಾರಿಗೆ – Transportation	ರಸ್ತೆ ಸುರಕ್ಷತೆ ನಿಯಮಗಳನ್ನು ಸ್ವತಂತ್ರವಾಗಿ ಅನುಸರಿಸುವರು. (ಪಾದಚಾರಿ ರಸ್ತೆಯಲ್ಲಿ ನಡೆಯುವುದು, ರಸ್ತೆದಾಟುವುದು ಇತ್ಯಾದಿ) Follows road safety rules. (walking on the side, crossing road, etc) independently.										
		ಸಂಚಾರಿ ಚಿಹ್ನೆಗಳನ್ನು ಗುರುತಿಸುವರು. (ಸಿಗ್ನಲ್ ದೀಪಗಳು, ಚಿಹ್ನೆಗಳು – ಝಿಬ್ರಾ ಕ್ರಾಸ್, ಯು–ತಿರುವು, ಸೇತುವೆ/ರೈಲ್ವೆ ಸೇತುವೆ ಇತ್ಯಾದಿ) Identifies traffic symbols (signal lights, symbols – zebra crossing, U-turn, bridge/ railway bridge etc)										
		ಸಮುದಾಯದಲ್ಲಿ ಸಹಾಯ ಬಯಸುವ/ಆಪತ್ತಿನಲ್ಲಿರುವ ಜನರನ್ನು ಗುರುತಿಸುವುದು. ವೈದ್ಯರು ಅಗ್ನಿಶಾಮಕದಳದ ಸಿಬ್ಬಂದಿ, ಇತ್ಯಾದಿ Identifies people in the community who would be of help in an emergency – doctor, fire-fighter, etc.										
7.	ನಮ್ಮ ಪರಿಸರ – Our Environment	ಒಂದು ವಸ್ತುವಿನ ಪರಿಣಾಮ ಮತ್ತೊಂದರ ಮೇಲೆ ಹೇಗೆ ಆಗುತ್ತದೆ ಎಂಬುದನ್ನು ಗುರುತಿಸುವರು. (ಉದಾ: ನೀರಿನೊಳಕ್ಕೆ ಉಪ್ಪನ್ನು ಹಾಕಿದರೆ ಅದು ಕರಗುತ್ತದೆ ಮತ್ತು ಬಿಸಿಲಿನಲ್ಲಿ ಮಂಜುಗಡ್ಡೆಯನ್ನು ಇಟ್ಟರೆ ಅದು ಕರಗುತ್ತದೆ) Recognizes the effect of one object on an another (e.g., if I put salt in water it will dissolve, if I put ice in the sun it will melt).										
		ಕಾರ್ಯಕಾರಣ ಸಂಬಂಧಗಳನ್ನು ಮಾಡುವರು. (ಅಬ್ದುಲ ಅನಾರೋಗ್ಯದ ಕಾರಣ ಶಾಲೆಗೆ ಬರಲಿಲ್ಲ. ಮಳೆ ಇಲ್ಲದ ಕಾರಣ ಸಸ್ಯ ಬಾಡಿಹೋಯಿತು) Makes causal connections (e.g., Abdul did not come to school because he was sick, the plant died because it has not rained).										
		ಹೊಲದಲ್ಲಿ ಅಥವಾ ಕಲೆ/ಕರ ಕುಶಲ ಕಲೆಗಳಲ್ಲಿ ಕೆಲಸ ಮಾಡುವಾಗ ಆಯಾ ಕೆಲಸಕ್ಕೆ ಸಮರ್ಪಕವಾದ ಉಪಕರಣಗಳನ್ನು ಆಯ್ಕೆ ಮಾಡುವರು. Chooses appropriate tools for appropriate work when doing land work or in arts/crafts.										
8.	ಕಾಲಗಳು – Seasons	ಬೇಸಿಗೆ ಮತ್ತು ಚಳಿಗಾಲಗಳಲ್ಲಿ ಬಳಸುವ ಆಹಾರ ಮತ್ತು ಬಟ್ಟೆಗಳನ್ನು ವಿವರಿಸುವರು. Explains clothing and food for summer and winter.										
		ದಿನದ ಸೂರ್ಯೋದಯ ಮತ್ತು ಸೂರ್ಯಾಸ್ತಗಳನ್ನು ಸಂಬಂಧೀಕರಿಸುವರು. Connects sunrise and sunset today and night.										
		ಚಿತ್ರ ರಚಿಸುವುದು, ಬಣ್ಣ ಹಚ್ಚುವುದು, ಹಾಡುವುದು ಮತ್ತು ನೃತ್ಯ ಮಾಡುವುದರ ಮೂಲಕ ತಮ್ಮ ಸಂತೋಷ ಮತ್ತು ಆಶ್ಚರ್ಯವನ್ನು ವ್ಯಕ್ತಪಡಿಸುವರು. Draws, paints, sings, dances to express their joy and wonder.										
9.	ಸಂವಹನ – Communication	ಧ್ವನಿಯ ಪ್ರಮಾಣ ಮತ್ತು ಲಯದ ವೇಗವನ್ನು (ಮಧ್ಯಮ ಸ್ವರ) ಗುರುತಿಸುವರು. Recognises the mid-range in volume and tempo.										
		ಶಿಕ್ಷಕರ ನೆರವಿನೊಂದಿಗೆ ಡಿಜಿಟಲ್ ತಂತ್ರಜ್ಞಾನದ ಉಪಕರಣಗಳಾದ ಸ್ಮಾರ್ಟ್‌ಫೋನ್ ಟ್ಯಾಬ್‌ಲೆಟ್‌ಗಳನ್ನು ಬಳಸುವುದರಲ್ಲಿ ತೊಡಗಿಕೊಳ್ಳುವರು. Engages with digital technology like smartphones/ tablets with the assistance of the teacher.										
		ಸಂಗೀತ ವಾದ್ಯ ಮತ್ತು ಗಾಯನ ಸಂಗೀತದ ನಡುವಿನ ವ್ಯತ್ಯಾಸವನ್ನು ಗುರುತಿಸುವರು ಮತ್ತು ಎರಡನ್ನೂ ಪರಿಶೋಧಿಸುವರು. Differentiates between instrumental and vocal music and explores both.										

NOT TO BE REPUBLISHED